6) ಮತ್ತೆ ಪಟ್ಟಣದ 8. ಕಿ. ಮೀ. ದೂರದಲ್ಲಿರುವ ಚಲುವಾಡಿಗಿ ಗ್ರಾಮದ ಹತ್ತಿರ ಅಂತರ ಜಲ ದೊರೆಯುವ ಸಾಧ್ಯತೆಯನ್ನು ನಿರೀಕ್ಷಿಸಿ ಇಲ್ಲಿ ಕೊಳವೆ ಬಾವಿಗಳನ್ನು ಕೊರೆದು ನೀರು ಸರಬರಾಜು ಮಾಡುವ 75-00 ಲಕ್ಷ ರೂ. ಅಂದಾಜಿನ ಪ್ರಸ್ತಾವನೆ ಇದ್ದು ಇದನ್ನು ಕೊಪ್ಪಳ ಟಾಸ್ಕ್‌ಫೋರ್ಸ್ ಸಮಿತಿಗೆ ಒಪ್ಪಿಸಲಾಗಿದ್ದು ಹಣ ಬಿಡುಗಡೆಯಾದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

(ಋ) ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ವಯೋಮಿತಿ ಮೀರಿದವರಿಗೆ ಆದ್ಯತೆ.

ಶ್ರೀ ಕುಂಭ್ಳೆ ಸುಂದರರಾವ್ (ಸುರತ್ಕಲ್):- ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಪ್ರೌಢಶಾಲಾ ಶಿಕ್ಷಕರುಗಳ ನೇಮಕಾತಿಯ ಪ್ರಕ್ರಿಯೆಯು ನಡೆಯುತ್ತಿದ್ದು ಶಿಕ್ಷಕರುಗಳ ಕೊರತೆ ನೀಗಿಸುವಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಅಭಿನಂದಿಸುವುದರೊಂದಿಗೆ ಕಳೆದ ಬಾರಿಯ ವರೆಗೂ ನೇಮಕಾತಿ ಮಾಡುವಾಗ ಕೇವಲ ಅಂಕಗಳ ಅರ್ಹತೆಯ ಆಧಾರದಲ್ಲಿ ಆಯ್ಕೆ ಮಾಡಿರುವುದರಿಂದ ವಯೋಮಿತಿ ಮೀರಿದವರು (29 ವರ್ಷ ದಾಟಿದವರು) ಬಹಳಷ್ಟು ಪದವೀಧರರು ನೇಮಕಗೊಳ್ಳದೆ ನಿರುದ್ಯೋಗಿಗಳಾಗಿ ಇರುವಂತಾಯಿತು. ಆದುದರಿಂದ ಈ ಬಾರಿಯ ನೇಮಕಾತಿಯ ಸಂದರ್ಭದಲ್ಲಿ ಪ್ರಾಥಮಿಕ ಶಿಕ್ಷಕರ ನೇಮಕಾತಿ ಮಾಡುವಾಗ ಕೈಗೊಂಡ ನಿಯಮದಂತೆ ಅಂದರೆ 29 ವರ್ಷ ಆದವರಿಗೆ ಆದ್ಯತೆ ನೀಡಿ ನೇಮಕಾತಿ ಸಂದರ್ಭದಲ್ಲಿಯೂ ಕೂಡ ಅಳವಡಿಸುವಂತೆ ಕ್ರಮ ಜರುಗಿಸಿ ವಯೋಮಿತಿಯನ್ನು ತಲುಪುತ್ತಿರುವ ನಿರುದ್ಯೋಗಿ ಪದವೀಧರರಿಗೆ ಅನುಕೂಲ ಮಾಡಿಕೊಡಬೇಕೆಂಬ ವಿಷಯದ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಲ್ಲಿ ಅರಿಕೆ ಮಾಡುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :-

ಮಾನ್ಯ ಉಪಾಧ್ಯಕ್ಷರೇ, ರಾಜ್ಯದಲ್ಲಿ ಪ್ರೌಢಶಾಲಾ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ವಿಭಾಗಮಟ್ಟದಲ್ಲಿ ಈಗಾಗಲೇ ಪ್ರಕಟಣೆಯನ್ನು ಹೊರಡಿಸಲಾಗಿದೆ. ಈ ನೇಮಕಾತಿಗಳನ್ನು ಪ್ರಚಲಿತ ನೇಮಕಾತಿ ಅನುಸಾರ ಮಾಡಲಾಗುತ್ತಿದ್ದು ಅರ್ಹತೆಯನ್ನು ಆಧಾರವಾಗಿ ತೆಗೆದುಕೊಳ್ಳಲಾಗುತ್ತದೆ. ಪ್ರೌಢಶಾಲಾ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಗರಿಷ್ಟ ವಯೋಮಿತಿ ಸಾಮಾನ್ಯ ವರ್ಗಕ್ಕೆ 40 ವರ್ಷ ಹಿಂದುಳಿದ ವರ್ಗಗಳಿಗೆ 43 ವರ್ಷ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಪ್ರವರ್ಗ-1 ಅಭ್ಯರ್ಥಿಗಳಿಗೆ 45 ವರ್ಷ ಇರುತ್ತದೆ. ಗರಿಷ್ಟ ವಯೋಮಿತಿ ಸಾಕಷ್ಟು ಹೆಚ್ಚಿರುವುದರಿಂದ ಎಲ್ಲಾ ಅಭ್ಯರ್ಥಿಗಳಿಗೂ ಸಾಕಷ್ಟು ಅವಕಾಶಗಳು ದೊರೆಯುತ್ತವೆ. ಪ್ರೌಢಶಾಲಾ ಹಂತವು ಶಿಕ್ಷಣದ ಪ್ರಮುಖ ಘಟ್ಟವಾಗಿದ್ದು, ಉತ್ತಮ ಅರ್ಹತೆ ಹೊಂದಿದ ಶಿಕ್ಷಕರ ಅಗತ್ಯತೆ ಇದೆ. ಆದ್ದರಿಂದ ವಯೋಮಿತಿ ಒಂದನ್ನೇ ಆಧರಿಸಿ ನೇಮಕಾತಿ ಮಾಡುವುದರಿಂದ ಶೈಕ್ಷಣಿಕ ಭೋದನೆಯ ಮಟ್ಟದ ಮೇಲೆ ಸಾಕಷ್ಟು ಪ್ರತಿಕೂಲ ಪರಿಣಾಮ ಆಗುವುದು. ಈ ಹಿನ್ನೆಲೆಯಲ್ಲಿ ಸರ್ಕಾರವು ಪ್ರೌಢಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಅರ್ಹತೆಯನ್ನೇ ಆಧಾರವಾಗಿ ಇಟ್ಟು ಕೊಳ್ಳಬೇಕೆಂದು ನಿರ್ಧರಿಸಿದೆ.

ಪ್ರಾಥಮಿಕ ಶಿಕ್ಷಕರ ನೇಮಕಾತಿ ಮಾಡುವಾಗ 29 ವರ್ಷ ಮೀರಿದ ಅಭ್ಯರ್ಥಿಗಳನ್ನು ನೇಮಕಾತಿಗೆ ಪರಿಗಣಿಸಿದಾಗಲೂ ವಯೋಮಿತಿ ಒಂದನ್ನೇ ಆಧಾರವಾಗಿ ಇಟ್ಟುಕೊಂಡಿಲ್ಲ. ಅಲ್ಲಿಯೂ ಸಹ ಅಭ್ಯರ್ಥಿಗಳ ಅರ್ಹತೆಯನ್ನೇ ಆಧಾರವಾಗಿ ಇಟ್ಟುಕೊಂಡು ನೇಮಕಾತಿ ಮಾಡಲಾಗಿದೆ. ಪ್ರೌಢಶಾಲಾ ಶಿಕ್ಷಕರಿಗೆ ಸಂಬಂಧಿಸಿದಂತೆ ಅರ್ಹತೆಯೊಂದನ್ನೇ ಆಧಾರವಾಗಿ ಇಟ್ಟುಕೊಳ್ಳಬೇಕಾಗಿರುವುದರಿಂದ ನೇಮಕಾತಿಗಳನ್ನು ಮೀಸಲಾತಿ ನಿಯಮ ಹಾಗೂ ಅರ್ಹತೆಯ ಆಧಾರದ ಮೇಲೆ ಮಾಡಲಾಗುವುದು.

(ಖೂ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಶ್ರಯ ಮತ್ತು ಡಾ. ಅಂಬೇಡ್ಕರ್ ಯೋಜನೆಯಡಿ ಮನೆಗಳ ನಿರ್ಮಾಣಕ್ಕೆ ಹಣ ಬಿಡುಗಡೆ.

ಶ್ರೀ. ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) :- ಮಾನ್ಯ ಉಪಾಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದೆ ಮಂಜೂರಾದ ಆಶ್ರಯ ಮತ್ತು ಡಾ. ಅಂಬೇಡ್ಕರ್ ಯೋಜನೆಯಡಿ ಮಂಜೂರಾದ ಮನೆಗಳ ನಿರ್ಮಾಣಕ್ಕೆ ಹಣ ಪಾವತಿಯಾಗದಿರುವುದರಿಂದ, ಇದರಿಂದ ಮನೆಗಳು ಪೂರ್ಣಗೊಳ್ಳದೆ ಮಳೆಯಿಂದಾಗಿ ಗೋಡೆ ಕುಸಿದು ಮನೆಗಳು ಬಿದ್ದುಹೋಗುವ ಸಾಧ್ಯತೆ ಇದೆ. ಸದರಿ ಯೋಜನೆಗಳಡಿ ಫಲಾನುಭವಿಗಳಿಗೆ ಮಂಜೂರಾದ ಮನೆಗಳನ್ನು ಪೂರ್ಣಗೊಳಿಸುವುದಕ್ಕಾಗಿ ಅವರು ಹಣಕ್ಕಾಗಿ ತಮ್ಮತಮ್ಮ ಊರುಗಳಿಂದ ತಾಲ್ಲೂಕು ಪಂಚಾಯಿತಿ ಕಛೇರಿಗೆ ಅಲೆಯುತ್ತಿದ್ದು, ಸರ್ಕಾರ ಈ ಬಗ್ಗೆ ತುರ್ತು ಗಮನಹರಿಸಿ ಮುಂದೆ ಆಗಬಹುದಾದ ಅನಾಹುತವನ್ನು ತಪ್ಪಿಸಲು ಆದಷ್ಟು ಶೀಘ್ರ ಹಣ ಬಿಡುಗಡೆ ಮಾಡಬೇಕೆಂದು ನಾನು ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :- ಮಾನ್ಯ ಉಪಾಧ್ಯಕ್ಷರೇ,

ದಕ್ಷಿಣ ಕನ್ನಡ ಜಿಲ್ಲೆಗೂ ಕೆಳಕಂಡಂತೆ ಆಶ್ರಯ- ಅಂಬೇಡ್ಕರ್ ಯೋಜನೆಯಡಿಯಲ್ಲಿ ಭೌತಿಕ ಗುರಿ ಹಾಗೂ ಇದುವರೆವಿಗೂ ಬಿಡುಗಡೆ ಮಾಡಿದ ಹಾಗೂ ಮಾಡಬೇಕಾದ ಹಣದ ವಿವರ ತೋರಲಾಗಿದೆ.

"ಆಶ್ರಯ" (ರೂ. ಲಕ್ಷಗಳಲ್ಲಿ)

ವರ್ಷ	ಭೌತಿಕ ಗುರಿ	ಜಿಲ್ಲೆಗೆ ನೀಡಬೇಕಾದ ಹಣ		ಜಿಲ್ಲೆಗೆ ನೀಡಲಾದ ಹಣ		ಷರಾ
		ಸಬ್ಸಿಡಿ	ಸಾಲ	ಸಬ್ಸಿಡಿ	ಸಾಲ	
1995-96	2800	250-00	2155-00	476-92	350-00	1994-95 ರಲ್ಲಿ 6409 ಮನೆಗಳನ್ನು ಪ್ರಾರಂಭಿಸಲಾಗಿದೆ. ಆದ್ದರಿಂದ ಹೆಚ್ಚಿಗೆ ಹಣವನ್ನು ನೀಡಲಾಗುತ್ತಿದೆ.